# ನಮ್ಮ ಭೂಮಿಯನ್ನು "ಭಾರತ" ಎಂದೇಕೆ ಕರೆಯುತ್ತಾರೆ?

**ಡಾ|| ಡಿ.ಕೆ. ಹರಿ, ಹೇಮ ಹರಿ,**

**ಭಾರತ್ ಗ್ಯಾನ್**

"ನಮ್ಮ ಭೂಮಿಯನ್ನು "ಭಾರತ" ಎಂದೇಕೆ ಕರೆಯುತ್ತಾರೆ?" ಎಂಬ ಪ್ರಶ್ನೆ ಕೇಳಿದಾಗ ಸಿಗುವ ಅತೀ ಸಾಮಾನ್ಯವಾದ ಉತ್ತರವೆಂದರೆ, ರಾಜ ದುಶ್ಯಂತ ಮತ್ತು ಶಕುಂತಲೆಯ ಪುತ್ರನಾದ ರಾಜನ ಭರತನ ಹೆಸರನ್ನು ಈ ಭೂಮಿಗೆ ಇಡಲಾಗಿದೆ ಎಂದು. ರಾಜ ಭರತನು ಭರತ ವಂಶದ ಮೂಲಜನಕನು, ಚಂದ್ರವವಂಶದ ವಂಶಾವಳಿಯವನು. ಕೌರವರು ಮತ್ತು ಪಾಂಡವರು ಚಂದ್ರವಂಶದವರು. ಅವರ ನಡುವೆ ನಡೆದ ಯುದ್ಧವೇ "ಮಹಾಭಾರತ" .

ಈ ಪ್ರಶ್ನೆಗೆ ಹಾಗೆಯೇ ಉತ್ತರವನ್ನು ಹುಡುಕುತ್ತಾ ಹೋದರೆ, ನೃತ್ಯ, ನಾಟಕ, ಸಂಗೀತ ಮತ್ತು ಇನ್ನಿತರ ಕಲಾರೂಪಗಳ ಬಗ್ಗೆ ಮೂಲಭೂತವಾದ ರಚನೆಯಾದ "ನಾಟ್ಯಶಾಸ್ತ್ರ"ದ ರಚನಾಕಾರರಾದ ಋಷಿ ಭರತ ಮುನಿಯವರ ಹೆಸರನ್ನು ಈ ಭೂಮಿಗೆ, "ಭಾರತ" ಎಂದು ಹೆಸರಿಡಲಾಗಿದೆ ಎಂಬ ಮತ್ತೊಂದು ಉತ್ತರ ಸಿಗುತ್ತದೆ.

ಇನ್ನೂ ಮುಂದೆ ಹೋದರೆ, ಮಹರ್ಷಿ ಜಡಭರತದವರ ಬಳಿಗೆ, ಅದರ ನಂತರ ಇಕ್ಷ್ವಾಕು ರಾಜನಾದ ರಾಜ ಋಷಭ ದೇವನ ಪುತ್ರನಾದ ರಾಜ ಭರತನ ಬಳಿಗೆ ತಲುಪುತ್ತೇವೆ. ರಾಜ ಋಷಭ ದೇವರನ್ನು ಜೈನ ಪರಂಪರೆಯಲ್ಲಿ ಆದಿ ತೀರ್ಥಂಕರರಾಗಿ, ಭಗವಾನ್ ಆದಿನಾಥರಾಗಿ ಪರಿಗಣಿಸುತ್ತಾರೆ. ತನ್ನ ತಂದೆ ಸನ್ಯಾಸತ್ವವನ್ನು ಪಡೆದುಕೊಂಡ ನಂತರ ರಾಜ ಭರತನು ಅಯೋಧ್ಯೆಯ ಆಳ್ವಿಕೆಯನ್ನು ಆರಂಭಿಸಿದ. ರಾಜನಾದ ನಂತರ ಇಡೀ ಭೂಮಿಯನ್ನು ಗೆದ್ದ ಮತ್ತು ಈ ಭೂಮಿಯ ಪ್ರಥಮ ಚಕ್ರವರ್ತಿಯೆಂದು ಕರೆಯಲ್ಪಡುತ್ತಾನೆ. ರಾಜ ಭರತನು ಒಂದು ತೀರದಿಂದ ಮತ್ತೊಂದು ತೀರದವರೆಗೆ ಈ ಭೂಮಿಯನ್ನು ಆಳಿದ. ಆದ್ದರಿಂದ ಈ ಭೂಮಿಗೆ "ಭಾರತ" ಎಂಬ ಹೆಸರು ಬಂದಿತು. ಪುರಾಣಗಳಲ್ಲಿ ಮತ್ತು ಅಯೋಧ್ಯೆಯ ಭೂಮಿಯ ಭೂಗೋಳದಲ್ಲಿ ಪೌರಾಣಿಕ ಹಾಗೂ ಜೈನ ದಂತಕಥೆಗಳಲ್ಲಿ ಸುಂದರವಾದ ಸಮ್ಮಿಳಣವನ್ನು ಕಾಣಬಹುದು.

ರಾಮಾಯಣದ ಕಾಲದಲ್ಲಿ ರಾಜಾ ರಾಮನ ಸಹೋದರನಾದ ರಾಜಕುವರ ಭರತನಿದ್ದನು. ಹೀಗೆ, "ಭರತ" ಎಂದು ಕರೆಯಲ್ಪಡುತ್ತಿದ್ದ ಅನೇಕ ಮಹಾನ್ ವ್ಯಕ್ತಿಗಳು ಈ ಭೂಮಿಯಲ್ಲಿ ಜೀವಿಸಿದ್ದರು.

ಇವೆಲ್ಲವೂ ಎಬ್ಬಿಸುವ ಪ್ರಶ್ನೆಯೆಂದರೆ, "ಭರತ" ಎಂದು ಕರೆಯಲ್ಪಡುವ ಅಷ್ಟೊಂದು ಮಹಾತ್ಮರೇಕೆ ಇದ್ದರು ಮತ್ತು ಇದರಿಂದಾಗಿ "ಭಾರತ" ಎಂಬ ಈ ಭೂಮಿಯ ಹೆಸರು ಅವರಿಂದ ಬಂದಿತು ಎಂದು ಏಕೆ ಹೇಳಲಾಗುತ್ತದೆ?

## ಸವಿಯಬಹುದಾದ ಒಂದು ಉತ್ತರ

ಈ ಪ್ರಶ್ನೆಗೆ ಉತ್ತರವನ್ನು ಪಡೆಯಲು "ಭಾರತ" ಎಂಬ ಹೆಸರನ್ನು ಅರ್ಥ ಮಾಡಿಕೊಳ್ಳಬೇಕು. ಈ ನಾಗರಿಕತೆಯ ಹೆಸರುಗಳಲ್ಲಿನ ಸೌಂದರ್ಯವೆಂದರೆ, ಅವೆಲ್ಲವೂ ಬಹಳ ಅರ್ಥ ಪೂರ್ಣವಾಗಿರುವುದು.

‘‘ಭಾರತ’’ ಎಂಬ ಪದವು ಶಬ್ದದ ವ್ಯುತ್ಪತ್ತಿಯಿಂದ, ನೇರವಾದ ಅರ್ಥದಿಂದ, ಅಲಂಕಾರಿಕದಿಂದ, ದೈಹಿಕ ಹಾಗೂ ವಾಸ್ತವತೆಯ ಅಂಶಗಳಿಂದ ಅನೇಕ ಅರ್ಥಗಳನ್ನು ಹೊಂದಿದೆ.

**ಒಂದು ಶಬ್ದದ ವ್ಯುತ್ಪಕ್ತಿಯ, ಅಲಂಕಾರಿಕ ಸಂಬಂಧ**

ಬೆಳಕು ಜ್ಞಾನದೊಡನೆ ಮತ್ತು ಸಾಕ್ಷಾತ್ಕಾರದೊಡನೆ ಸಂಬಂಧಪಟ್ಟಿದೆ. ಅಜ್ಞಾನ ಮತ್ತು ಜ್ಞಾನ ಎಂಬ ಪದಗಳನ್ನು ಸೂಕ್ತವಾಗಿಯೇ, ಅಲಂಕಾರಿಕವಾಗಿ ಕತ್ತಲು ಮತ್ತು ಬೆಳಕು ಎಂದು ಕರೆಯಲಾಗಿದೆ. ಬೆಳಕನ್ನು ಜ್ಞಾನ ಮತ್ತು ಸಾಕ್ಷಾತ್ಕಾರಕ್ಕೆ ಪರ್ಯಾಯವಾಗಿ ಬಳಸಲಾಗುತ್ತದೆ.

‘‘ರ’’ ಎಂಬ ಅಕ್ಷರವು, ‘‘ಆಕರ್ಷಕವಾಗಿರುವ’’, ‘‘ಬಯಸಲು ಯೋಗ್ಯವಾದಂತಹ’’, ‘‘ಮೆಚ್ಚಲ್ಪಡುವ’’ ಎಂಬ ಅರ್ಥವನ್ನು ಸೂಚಿಸುತ್ತದೆ. ಯಾವುದು ಆಕರ್ಷಣೆಯನ್ನು ಹೊರಸೂಸುತ್ತದೊ, ಗಮನವನ್ನು ಸೆಳೆಯುತ್ತದೊ, ಅದು.

ಇದರಿಂದ ‘‘ರಾಮ’’ ಎಂದರೆ ‘‘ಆಕರ್ಷಕವಾಗಿರುವ’’, ‘‘ರಮ್ಯ’’ ಎಂದರೆ ‘‘ಪ್ರಿಯವಾಗಿರುವ, ಆಕರ್ಷಕವಾಗಿರುವ’’ ಎಂಬ ಪದಗಳೂ ಸಿಗುತ್ತವೆ. ‘‘ರತಿ’’ ಎಂದರೆ ‘‘ಇಂದ್ರಿಯಗಳಿಗೆ ಸಂತೋಷವನ್ನು ನೀಡುವ’’ ಎಂಬ ಪದವೂ ಸಿಗುತ್ತದೆ. ಪ್ರೇಮ ಹಾಗೂ ಕಾಮದ ದೈವವಾದ ‘‘ಕಾಮದೇವ’’ನ, ‘‘ಮನ್ಮಥನ’’ ಪತ್ನಿಗೆ ಸೂಕ್ತವಾಗಿ ‘‘ರತಿ’’ ಎಂಬ ಹೆಸರನ್ನು ಕೊಡಲಾಗಿದೆ. ಯಾವುದನ್ನು ಸವಿಯಬಹುದೋ ಅದನ್ನು ರತಿ ಎಂದು ಕರೆಯಲಾಗುತ್ತದೆ.

‘‘ಭಾರತ’’ ಅಥವಾ ‘‘ಭಾರತಿ’’ ಎಂದರೆ ಜ್ಞಾನದ ಅಭಿಮಾನಿಗಳು, ಜ್ಞಾನವನ್ನು ಆಸ್ವಾದಿಸುವವರು, ಜ್ಞಾನವನ್ನು ಅರಸುವವರು.

ಆದ್ದರಿಂದ ಈ ಭೂಮಿಯಲ್ಲಿ ಅನಾದಿ ಕಾಲದಿಂದಲೂ ಜ್ಞಾನದ ಅಭಿಮಾನಿಗಳಿದ್ದರು, ಜ್ಞಾನದ ಆಸ್ವಾದಕರಿದ್ದರು. ಈ ಕಾರಣದಿಂದಾಗಿ ಅನೇಕ ಮಹಾನ್ ವ್ಯಕ್ತಿತ್ವಗಳು, ರಾಜರು ‘‘ಭರತ’’ ಎಂಬ ಹೆಸರನ್ನು ಹೊಂದಿದ್ದರು ಮತ್ತು ಅವರಿಂದಾಗಿಯೇ ಈ ಭೂಮಿಗೆ ಭಾರತ ಎಂಬ ಹೆಸರು ಮುಂದುವರಿಯುತ್ತಾ ಹೋಯಿತು, ಅದರ ಜನತೆಯು ಜ್ಞಾನವನ್ನು ಅರಸುವ, ಜ್ಞಾನವನ್ನು ಆಸ್ವಾದಿಸುವ ಸಹಜ ಗುಣವನ್ನು ಹೊಂದಿರುವುದರಿಂದ, ‘‘ಭಾ’’ ಎಂದರೆ ‘‘ಜ್ಞಾನ’’, ‘‘ರತ’’ ಎಂದರೆ ‘‘ಆಸ್ವಾದಿಸುವ’’. ‘‘ಭಾರತ’’ ಎಂದರೆ ‘‘ಜ್ಞಾನವನ್ನು ಆಸ್ವಾದಿಸುವ ಜನರ ಭೂಮಿ’’.

**ವಾಸ್ತಾವಿಕ ಹಾಗೂ ಭೌತಿಕ ಸಂಬಂಧ**

ಈ ಭೂಮಿಯು ಭೌತಿಕವಾದ ‘‘ಭಾ’’ ಅನ್ನು, ‘‘ನಿಜವಾದ ಸೂರ್ಯನ ಬೆಳಕನ್ನು’’ ಅಪಾರವಾಗಿ ಹೊಂದಿದೆ. ಆದ್ದರಿಂದ ಭಾರತವು ಸೂರ್ಯನು ನೀಡುವ ಅಪಾರ ಸೂರ್ಯನ ಬೆಳಕನ್ನು, ಸಮೃದ್ಧಿಯನ್ನು ಹೊಂದಿರುವಂತಹ ಭೂಮಿ.

**ಇದರಿಂದ ಏಳುವ ಪ್ರಶ್ನೆಯೆಂದರೆ, “ಜಗತ್ತಿನ ಇತರ ಭೂಮಿಗಳ ಬಗ್ಗೆ ಏನು? ಇತರ ಭೂಮಿಗಳೂ ಸಹ ಸೂರ್ಯನು ನೀಡುವ ಸಮೃದ್ಧಿಯನ್ನು ಪಡೆಯುವುದಿಲ್ಲವೆ?”**

ಸಮಭಾಜಕದ ಬಳಿ ಅನೇಕ ಭೂಮಿಗಳಿದ್ದರೂ ಸಹ, ಭಾರತದ ಭೂಮಿಗೆ ತನ್ನದೇ ಆದ ಅನುಕೂಲತೆಗಳಿವೆ:-

* ಸಮಭಾಜಕದ ಬಳಿ ಅನೇಕ ದ್ವೀಪಗಳಿವೆ, ಆದರೆ ಭಾರತದ ಭೂಮಿಯು ಅಪಾರ ಭೂಮಿಯನ್ನು ಹೊಂದಿದೆ.
* ಇದರ ಭೂಗೋಳವು ಒಳ್ಳೆಯ ಮಳೆಯನ್ನು ಪಡೆಯುವಂತದ್ದಾಗಿರುವುದಲ್ಲದೆ, ಇದರ ನದಿಗಳು ಈ ಭೂಮಿಯ ಉದ್ದ ಅಗಲಕ್ಕೂ ಹರಿಯುತ್ತವೆ.
* ಸಮಭಾಜಕ ಪ್ರದೇಶಗಳು ಪ್ರತಿನಿತ್ಯ ಅಲ್ಪಕಾಲಕ್ಕಾಗಿ ಸ್ವಲ್ಪ ಪ್ರಮಾಣದ ಮಳೆಯನ್ನು ಪಡೆದರೆ, ಭಾರತದ ಭೂಮಿಯು ಋತುಗಳಿಗೆ ಅನುಗುಣವಾಗಿ, ಧಾರಕಾರವಾದ ಮಳೆಯನ್ನು ಪಡೆಯುತ್ತದೆ.
* ಸುಡುವ ಬೇಸಿಗೆಯ ನಂತರ ಈ ಮಳೆಗಳನ್ನು ಪಡೆಯುವುದರಿಂದ ಸಾಕಷ್ಟು ನೀರೂ ಸಿಗುವುದಲ್ಲದೆ, ಒಳ್ಳೆಯ ಫಸಲನ್ನು ಪಡೆಯುವ ಸಲುವಾಗಿ ತಣ್ಣನೆಯ ವಾತಾವರಣವೂ ಉಂಟಾಗುತ್ತದೆ.

ಆದ್ದರಿಂದ ಭಾರತದ ಭೂಮಿಯು ಸರಿಯಾದ ಪ್ರಮಾಣದ ಸೂರ್ಯನ ಬೆಳಕನ್ನು, ಭಾ ಅನ್ನು ಪಡೆಯುವುದಲ್ಲದೆ, ಅದು  ಬಹಳ ಕಾಲದವರೆಗೆ ಬಹಳ ಬಿಸಿಲನ್ನೂ ಹೊಂದಿರುವುದಿಲ್ಲ ಅಥವಾ ಬಹಳ ಕಾಲದವರೆಗೆ ಚಳಿಗಾಲವೂ ಇರುವುದಿಲ್ಲ ಮತ್ತು ವರ್ಷ ವಿಡೀ ಸೂಕ್ತವಾದ ವಾತಾವರಣವನ್ನು ಹೊಂದಿದೆ.

ತನಗೆ ಸಿಗುವ ಸೂರ್ಯನ ಬೆಳಕನ್ನು, ಋತುಗಳಿಗನುಸಾರವಾಗಿ ಮಳೆಯನ್ನು ಚೆನ್ನಾಗಿ ಬಳಸುವುದನ್ನು ಕಲಿತಿದೆ. ಈ ಕೊಡುಗೆಗಳನ್ನು ಜವಾಬ್ದಾರಿಯುತವಾಗಿ, ಸುಸ್ಥಿರವಾಗಿ ಫಸಲನ್ನು ಬೆಳೆಸುವ ಸಲುವಾಗಿ ಬಳಸಿ, ತಮಗೂ ಸಾಕಾಗುವಷ್ಟನ್ನು ಬೆಳೆಸಿ, ಜಗತ್ತಿನ ವ್ಯಾಪಾರಕ್ಕೂ ಸಾಕಾಗುವಷ್ಟು ಬೆಳೆಸುತ್ತಿದ್ದರು. ಇವೆಲ್ಲದ್ದರಿಂದಾಗಿ ಅನೇಕ ಸಹಸ್ರಮಾನಗಳವರೆಗೆ ಅವರಿಗೆ ಸಮೃದ್ಧಿಯನ್ನು ತಂದಿತು. ಇದರಿಂದಾಗಿ ಭಾರತದ ಉತ್ಪನ್ನಗಳು ಜಗತ್ತಿನ ಅನೇಕ ಭಾಗಗಳಲ್ಲಿ ಬಹಳ ಬೇಡಿಕೆಯಿತ್ತು ಮತ್ತು ಅನೇಕ ಸಹಸ್ರಮಾನಗಳವರೆಗೆ ಉತ್ಪಾದನೆಯಲ್ಲಿ ವ್ಯಾಪಾರದಲ್ಲಿ ಭಾರತವು ಜಗತ್ತಿನ ಅಧಿಪತ್ಯವನ್ನು ಹೊಂದಿತ್ತು. ಇಂದಿಗೂ ಸಹ ಸೌರಶಕ್ತಿಯ ಬಳಕೆಯ ನಾಯಕತ್ವವನ್ನು  ಹೊಂದಿದೆ. ಭಾರತೀಯರು ಸೌರ ಬೆಳಕನ್ನು ಬಳಸುವಲ್ಲಿ ನಿಷ್ಣಾತರು.

**ಆ ಹೆಸರಿಗೊಂದು ಲೋಹದ ಸ್ಪರ್ಶ**

ಭಾರತ ಎಂಬ ಹೆಸರಿಗೆ ಈ ಅಂಶಗಳೊಡನೆ ಮತ್ತೊಂದು ಅರ್ಥವೂ ಇದೆ. ಅನೇಕ ಸಹಸ್ರಮಾನಗಳಿಂದ ಭಾರತವು ಲೋಹಶಾಸ್ತ್ರದಲ್ಲಿ ಮೇಲುಗೈಯನ್ನು ಸಾಧಿಸಿದೆ:-

* ಜಗತ್ತಿನ ಅತ್ಯುತ್ತಮ ಗುಣಮಟ್ಟದ ಕಬ್ಬಿಣ ಮತ್ತು ಹೆಚ್ಚಿನ ಕಾರ್ಬನ್‌ಅನ್ನು ಉಳ್ಳ ಸ್ಟೀಲ್ ಅನ್ನು ಉತ್ಪಾದಿಸುತ್ತಿತ್ತು.
* ಅತ್ಯುತ್ತಮ ಗುಣಮಟ್ಟದ ಸ್ಟೀಲ್‌ನ ಉತ್ಪಾದನೆಗಳನ್ನು ಹೊರತರುತ್ತಿತ್ತು.
* ಝಿಂಕ್‌ಅನ್ನು ಕರಗಿಸುತ್ತಿತ್ತು.
* ಅತ್ಯುತ್ತಮ ಗುಣಮಟ್ಟದ ಮಿಶ್ರಲೋಹಗಳನ್ನು ಮಾಡುತ್ತಿತ್ತು – ತಾಮ್ರ, ಟಿನ್, ಝಿಂಕ್‌ನ ಮಿಶ್ರಣದಿಂದ ಉತ್ತಮವಾದ ಹಿತ್ತಾಳೆ ಮತ್ತು ಕಂಚನ್ನು ಉತ್ಪಾದಿಸುತ್ತಿತ್ತು.
* ಈ ಲೋಹಗಳನ್ನು, ಮಿಶ್ರಲೋಹಗಳನ್ನು ಸುಂದರವಾದ ವಿಗ್ರಹಗಳಾಗಿ, ಪಾತ್ರೆಗಳಾಗಿ, ಸಲಕರಣೆಗಳಾಗಿ, ಅಸ್ತ್ರಗಳಾಗಿ ಕೆತ್ತಲ್ಪಡುತ್ತಿದ್ದವು, ಮಾಡಲ್ಪಡುತ್ತಿದ್ದವು.

* ವಿಷಮಯವಾದ ಸೀಸ, ಪಾದರಸಗಳನ್ನು ನಿಭಾಯಿಸಿ, ಅವುಗಳ ನಿರ್ವಿಷಣ್ಣೀಕರಣ ಮಾಡಿಸಿ, ಅವುಗಳನ್ನು ಫಲದಾಯಕವಾಗಿ ಬಳಸಲಾಗುತ್ತಿತ್ತು.

ಲೋಹದ ಉತ್ಪನ್ನಗಳನ್ನು ಈ ಭೂಮಿಯಿಂದ ಬಹು ಬೇಡಿಕೆಯಿತ್ತು ಮತ್ತು ಈ ನಾಗರಿಕತೆಯು ಇದರಿಂದ ಬಹಳ ಖ್ಯಾತಿಯನ್ನು, ವ್ಯಾಪಾರವನ್ನು ಪಡೆದುಕೊಂಡಿತು. ಈ ಭೂಮಿಯ ಲೋಹಶಾಸ್ತ್ರದ, ಕುಂಬಾರಿಕೆಯ ಮೂಲವನ್ನು ಭೃಗು ಎಂಬ ಋಷಿಗಳಿಗೆ ಸಂಬಂಧ ಪಡಿಸಬಹುದು. ಅವರ ಹೆಸರಿನಲ್ಲಿ "ಭೃ" ಪದವು "ಬೆಂಕಿಯ ಹೊಳಪನ್ನು" ಮತ್ತು "ಬೆಂಕಿಯ, ಜ್ವಾಲೆಯ, ಗಾಳಿಯ ಶಬ್ದವನ್ನು" ಸೂಚಿಸುತ್ತದೆ. ಕರಗಿಸಲು ಬೇಕಾದ ಜ್ವಾಲೆ ಮತ್ತು ಗಾಳಿಯು ಭಸ್ತ್ರಿಕದ ಮೂಲಕ, ತಿದಿಯ ಲೋಹಶಾಸ್ತ್ರದೊಡನೆ ಸಂಬಂಧಪಟ್ಟಿದೆ.

**ಚೀನಾದ ದೃಢೀಕರಣ**

ಹಿಂದಿನ ದೊಡ್ಡ ನಾಗರಿಕತೆಗಳಿಗೆ ಚೀನಾದವರು ಬೇರೆ ಬೇರೆ ಗುಣಗಳನ್ನು ನೀಡಿದ್ದರು. ಅವರ ದೃಷ್ಟಿಯಲ್ಲಿ ಈ ಭೂಮಿಯು ಜ್ಞಾನದ ರಾಜನಾಗಿತ್ತು. ಈ ಭೂಮಿಯನ್ನು "ತಿಯಾನ್ಸು" ಎಂದರೆ "ದೈವೀಕ ಕೇಂದ್ರ" ಎಂದು ಕರೆದರು. ಈ ಭೂಮಿಯತ್ತ ವಿಜ್ಞಾನದ ಹಾಗೂ ಬೌದ್ಧ ಧರ್ಮದ ಅನೇಕ ಗ್ರಂಥಗಳಿಗಾಗಿ ನೋಡಿದರು. ಚೀನಾದ ಭಾಷೆಯಲ್ಲಿ ಭಾರತವನ್ನು ಇಂದಿಗೂ ಸಹ ತಿಯಾನ್ಸು ಎಂದೇ ಕರೆಯಲಾಗುತ್ತದೆ.

ಪರ್ಷಿಯ ಹಾಗೂ ಅರೇಬಿಯಾದ ದೃಢೀಕರಣ 8ನೆಯ ಸಿ॰ಯ ಪರ್ಷಿಯ ಮತ್ತು ಅರೇಬಿಯಾದ ಪಂಡಿತರು ಈ ನಾಗರಿಕತೆಯ ಮೇಲೆ ಬರೆದರು:–

1. ಬಸ್ರಾದ ಅಲ್ ಜಾಹಿಜ್ ಬಾಗ್ದಾದಿದನಲ್ಲಿ 716ಯಿಂದ 815ಸಿ॰ಯಲ್ಲಿ ಜೀವಿಸಿದ್ದರು.
2. ಅಬು ಉಮರ್ ಜಾಹಿಜ್ ಬಾಗ್ದಾದಿನಲ್ಲಿ, 868 ಸಿ॰ಯಲ್ಲಿ ಜೀವಿಸಿದ್ದ ಅರೇಬಿಯಾದ ತತ್ವಶಾಸ್ತ್ರಜ್ಞರು.
3. ಯಾಕ್ಯಾಬಿ, 897ಸಿ॰ಯಲ್ಲಿ ಈಜಿಪ್ಟ್‌ನಲ್ಲಿ ಜೀವಿಸಿದ್ದ ಅರೇಬಿಯಾದ ಇತಿಹಾಸಕಾರರು ಮತ್ತು ಭೂಗೋಳದ ತಜ್ಞರು.
4. ಸೈದ್ ಅಲ್ ಅಂಡಾಲುಸಿ, 1066 ಸಿ॰ಯಲ್ಲಿ ಅಂಡಾಲೂಸಿಯಾದ, ಸ್ಪೇನ್ (ಐಬೀರಿಯ)ದಲ್ಲಿ ಜೀವಿಸಿದ್ದ ಅರೇಬಿಯಾದ ತಜ್ಞರು.

ಇವರೆಲ್ಲರ ಬರಹಗಳಲ್ಲಿ ಭಾರತವನ್ನು ವಿಜ್ಞಾನದ, ತತ್ವಶಾಸ್ತ್ರದ, ವೈದ್ಯಕೀಯದ, ಖಗೋಳಶಾಸ್ತ್ರದ, ಗಣಿತದ, ಲಲಿತ ಕಲೆಯ, ಶಿಲ್ಪಶಾಸ್ತ್ರದ, ಲೋಹಶಾಸ್ತ್ರದ, ಸಂಗೀತ ವಾದ್ಯಗಳ, ಇನ್ನೂ ಅನೇಕ ವಿದ್ಯೆಗಳ ಭೂಮಿಯೆಂದು ಬರೆಯಲಾಗಿದೆ.

**ಒಂದು ಕಾಲಾತೀತವಾದ ಹೆಸರು**

ಭಾರತ ಎಂಬ ಹೆಸರನ್ನು ವೇದಗಳಲ್ಲಿ, ಪುರಾಣಗಳಲ್ಲಿ ಕಾಣಬಹುದಾಗಿದೆ.

ಋಗ್ ವೇದದಲ್ಲಿ ಋಷಿ ವಿಶ್ವಾಮಿತ್ರರು ತಮ್ಮ ಕಾಲದ ನಾಗರಿಕತೆಯನ್ನು ವಿವರಿಸುತ್ತಾ ತಮ್ಮ 3.53.12ನ "ಭರತಂ ಜನಂ"ನಲ್ಲಿ, ಈ ಭೂಮಿಯ ಮೇಲೆ ಜೀವಿಸಿದ ಜನರನ್ನು ಹೀಗೆ ವಿವರಿಸಿದ್ದಾರೆ:–

"ವಿಶ್ವಾಮಿತ್ರಸ್ಯ ರಕ್ಷತಿ ಬ್ರಹ್ಮೇದಂ ಭರತಂ ಜನಂ"

"ವಿಶ್ವಾಮಿತ್ರರ ಈ ಮಂತ್ರವು ಭಾರತದ ಜನರನ್ನು ರಕ್ಷಿಸುತ್ತದೆ".

**ಒಂದು ಬಹು–ವಿಮಿತೀಯವಾದ ಹೆಸರು ಆದ್ದರಿಂದ ಭಾರತ ಎಂಬ ಭೂಮಿಯ ಹೆಸರು:–**

* ಜ್ಞಾನಕ್ಕೆ (ಭಾ–ಗೆ) ಪ್ರಸಿದ್ಧವಾಗಿತ್ತು.
* ಸೂರ್ಯನಿಂದ (ಭಾ–ದಿಂದ) ಸಮೃದ್ಧವಾದ, ಕೃಷಿಯಿಂದ ಪೋಷಿಸಲ್ಪಟ್ಟ ಭೂಮಿಯ ಹೆಸರು.
* ಜ್ವಾಲೆಯಿಂದ (ಭಾ–ದಿಂದ) ತಯಾರಿಸಲ್ಪಟ್ಟ ಲೋಹಗಳಿಂದ, ಲೋಹಗಳ ಉತ್ಪನ್ನಗಳಿಂದ ಮಾಡುವ ವ್ಯಾಪಾರದಿಂದ ಸಮೃದ್ಧವಾದ ಭೂಮಿಯ ಹೆಸರು.

ನಮ್ಮ ಸ್ವಭಾವ ಮತ್ತು ನಮ್ಮ ಆಕಾಂಕ್ಷೆಗಳಿಗೆ ಅನುಗುಣವಾಗಿ ನಮ್ಮ ಭೂಮಿಗೆ ಮತ್ತು ನಮ್ಮ ನಾಗರಿಕತೆಗೆ "ಭಾರತ" ಎಂಬ ಹೆಸರನ್ನು ನೀಡಿದ್ದೆವು.

ಅನೇಕ ದೇಶಗಳಿಗೆ ಅವರ ಜನರ ಹೆಸರನ್ನು ಅಥವಾ ಭೌಗೋಳಿಕ ಅಥವಾ ಸ್ಥಳಾಕೃತಿಗೆ ಅನುಗುಣವಾಗಿ ಹೆಸರನ್ನು ಇಡಲಾಗಿದೆ. ಬಹಳ ಹಿಂದಿನ ಕಾಲದಲ್ಲೇ ತನ್ನ ಗುಣಕ್ಕೆ ಅನುಗುಣವಾಗಿ, ಜ್ಞಾನದ ಬೆಳಕನ್ನು ಅರಸುವ, ಸೂರ್ಯನ ಬೆಳಕಿನ ಸದ್ಬಳಕೆಯನ್ನು ಮಾಡಿಕೊಳ್ಳುವ, ಬೆಂಕಿಯ ಬೆಳಕನ್ನು ನಿಭಾಯಿಸಬಲ್ಲ ತನ್ನ ಜನರ ಗುಣಕ್ಕೆ ಅನುಗುಣವಾಗಿ ತನಗೆ "ಭಾರತ" ಎಂಬ ಹೆಸರನ್ನು ಇಟ್ಟುಕೊಂಡಂತಹ ನಾಗರಿಕತೆಯನ್ನು ಕಾಣುವುದು ಅತೀ ವಿರಳ.

ಈ ನಾಗರಿಕತೆಯ ನಾಯಕತ್ವವು ಜನರಿಗೆ ಸದಾ ಇವುಗಳ ಬಗ್ಗೆ ಮಾರ್ಗದರ್ಶನವನ್ನು ನೀಡುತ್ತಾ ಬಂದಿದೆ:–

* ವಿಜ್ಞಾನದ ಮತ್ತು ಪ್ರಕೃತಿಯ ಈ ಜಗತ್ತನ್ನು ಹೇಗೆ ಅರ್ಥ ಮಾಡಿಕೊಳ್ಳುವುದು.
* ದಿನನಿತ್ಯದ ಜೀವನದಲ್ಲಿ ಪ್ರಕೃತಿಯೊಡನೆ ಸಾಮರಸ್ಯವನ್ನು ಕಂಡುಕೊಳ್ಳುವುದು.
* ಸಹಜವಾದ ಜೀವನ ಶೈಲಿಯ ರೀತಿ.

ನಮ್ಮ ಗತದಿಂದ ಪಾಠಗಳನ್ನು ತೆಗೆದುಕೊಂಡು, ಅವುಗಳನ್ನೀಗ ಅಭ್ಯಾಸಕ್ಕೆ ತಂದು, ಅವುಗಳನ್ನು ಹರಡಿ, ಈ ಅಭ್ಯಾಸಗಳಿಂದಾಗಿ ಭಾರತವು ಹೇಗೆ ಅತೀ ಸಮೃದ್ಧವಾದ ರಾಷ್ಟ್ರವಾಗಿತ್ತು ಮತ್ತು ಜಗತ್ತು ಇದರಿಂದಾಗಿ ಭಾರತದತ್ತ ನೋಡುತ್ತಿತ್ತು ಎಂದು ಎಲ್ಲರಿಗೂ ಮನವರಿಕೆ ಮಾಡಿಕೊಡಬೇಕಾಗಿದೆ. ಈಗಾಗಲೇ ಸಾಬೀತು ಪಡಿಸಲಾಗಿರುವ ನಮ್ಮ ಪೂರ್ವಜರ ಬೋಧನೆಗಳನ್ನು ಒಂದಾಗಿ ಸೇರಿಸಿ, ಆ ಮಾದರಿಯನ್ನೇ ನಾವು ಈಗ ಅನುಸರಿಸಬೇಕಾಗಿದೆ, ಅದರಿಂದ ನಾವು ಬೇರೆ ರೀತಿಯಾಗಿ ಕಂಡರೂ ಸಹ ಈ ಅನುಸರಣೆಯಿಂದಾಗಿ, ಸಮಗ್ರವಾಗಿ ಆತ್ಮ ನಿರ್ಭರರಾಗುವಲ್ಲಿ, ಸ್ವವೃತ್ತರಾಗುವಲ್ಲಿ, ಸ್ವ–ಸುಸ್ಥಿರತೆಯನ್ನು ಕಂಡುಕೊಳ್ಳುವಲ್ಲಿ ನಾವು ಖಂಡಿತವಾಗಿಯೂ ಯಶಸ್ವಿಗಳಾಗುತ್ತೇವೆ.

ಹಿಂದುಳಿದು ಇತರರನ್ನು ಹಿಂಬಾಲಿಸುವುದು ನಮ್ಮ ಸ್ವಭಾವವೇ ಅಲ್ಲ. ಪ್ರತಿಯೊಂದು ರೀತಿಯಲ್ಲೂ ಈ ನಾಗರಿಕತೆಯು ನಾಯಕತ್ವವನ್ನು ವಹಿಸಿಕೊಂಡಿವೆ ಮತ್ತು ಉದಾಹರಣೆಯ ಸಮೇತವಾಗಿ ಜಗತನ್ನು ಮುನ್ನಡೆಸಿದೆ.

"ಭಾರತ" ಎಂಬ ನಮ್ಮ ಹೆಸರು ಇವೆಲ್ಲವನ್ನೂ, ಮತ್ತಿನಷ್ಟನ್ನೂ ಸೂಚಿಸುತ್ತದೆ!

**********************

No.of.words = 1035

## ಭಾರತ್ ಗ್ಯಾನ್‌ನ ಪರಿಚಯ
## ಡಾ|| ಡಿ. ಕೆ. ಹರಿ, ಡಾ|| ಹೇಮ ಹರಿ ದಂಪತಿಯಿಂದ ಸ್ಥಾಪಿತವಾದ

ಭಾರತ್ ಗ್ಯಾನ್, ಭಾರತದ ನಿರ್ದಿಷ್ಟವಾದ, ವೈಜ್ಞಾನಿಕವಾದ ಜ್ಞಾನವನ್ನು ಶೇಖರಿಸುತ್ತಿದೆ. ಇದಕ್ಕಾಗಿ ಪ್ರಾಚೀನ ಜ್ಞಾನದ ಮೂಲಗಳನ್ನು ಮತ್ತು ಆಧುನಿಕ ವೈಜ್ಞಾನಿಕ ಸಲಕರಣೆಗಳನ್ನು ಮತ್ತು ರೀತಿಗಳನ್ನು, ಇಂದಿನ ದಿನಕ್ಕೆ ಅನ್ವಯವಾಗುವ ದೃಷ್ಟಿಕೋನಕ್ಕೆ ಮತ್ತು ಮಹತ್ವಕ್ಕೆ ಅನುಗುಣವಾಗಿ ಬಳಸುತ್ತಿದೆ.

ಭಾರತೀಯ ನಾಗರಿಕತೆಯ ಜ್ಞಾನವು ಅನೇಕ ರೂಪಗಳಲ್ಲಿ ಛಿದ್ರಗೊಂಡಿರುವ ರೀತಿಗಳಲ್ಲಿ ಲಭ್ಯವಾಗಿದೆ – ಪುಸ್ತಕಗಳಲ್ಲಿ, ತಾಳೆಪತ್ರಗಳಲ್ಲಿ, ಪಂಡಿತರಲ್ಲಿ ಮೌಖಿಕ ಪದ್ಧತಿಯಾಗಿ, ವಿವಿಧ ಕಲಾ ರೂಪಗಳಲ್ಲಿ, ಈ ಭೂಮಿಯ ಪದ್ಧತಿಗಳಲ್ಲಿ ಮತ್ತು ಪರಂಪರೆಗಳಲ್ಲಿ ಲಭ್ಯವಾಗಿದೆ.

ಈ ಜ್ಞಾನದ ಸೀಮಿತವಾದ ಲಭ್ಯತೆಯಿಂದಾಗಿ ಮತ್ತು ಈ ರೀತಿಯ ಸಂಪನ್ಮೂಲಗಳು ಸುಲಭವಾಗಿ ಲಭ್ಯವಾಗದಿರುವ ಕಾರಣದಿಂದಾಗಿ, ಪ್ರಾಚೀನ ಭಾಷೆ ಮತ್ತು ಅವುಗಳಲ್ಲಿ ಅಭಿವ್ಯಕ್ತಪಡಿಸಲಾಗಿರುವ ಶೈಲಿಯಿಂದಾಗಿ, ವಿಷಯಗಳನ್ನು ಎತ್ತಿ ತೋರಿಸಲಾದ ರೀತಿಯಿಂದಾಗಿ, ಇತ್ಯಾದಿ ಕಾರಣಗಳಿಂದಾಗಿ ಇಂದಿನ ಪೀಳಿಗೆಗೆ ಈ ಜ್ಞಾನದ ಬಳಿ ಸುಲಭವಾಗಿ ಬರಲಾಗುತ್ತಿಲ್ಲ. ಇವೆಲ್ಲವೂ ಇಂದಿನ ದಿನದ ಅಭಿವ್ಯಕ್ತಿಯ ಶೈಲಿಗೆ ಅಥವಾ ತಿಳಿವಳಿಕೆಗೆ ತದ್ವಿರುದ್ಧವಾಗಿವೆ.

ನಿರ್ದಿಷ್ಟವಾದ ವೈಜ್ಞಾನಿಕ ಜ್ಞಾನ ಮತ್ತು ನಾಗರಿಕತೆಯ ಅಭ್ಯಾಸಗಳನ್ನು ಅರಸುತ್ತಿರುವ ಭಾರತ್‌ಗ್ಯಾನ್, ಅನೇಕ ಕಥೆಗಳನ್ನು, ಆಲೋಚನೆಗಳನ್ನು, ದೃಷ್ಟಿಕೋನಗಳನ್ನು, ಸಿದ್ಧಾಂತಗಳನ್ನು, ವಾಸ್ತವಿಕ ಘಟನೆಗಳನ್ನು ಮತ್ತು ವಾಕ್ಯಗಳನ್ನು ಸಂಕಲನ ಮಾಡಿದೆ.

ಆಧುನಿಕ ಮನೋವೈಖರಿಯನ್ನು ಹೊಂದಿರುವ ಪಾರಂಪಾರಿಕ ಪಂಡಿತರ ಮತ್ತು ಪಾರಂಪಾರಿಕ ಜ್ಞಾನದ ಬಗ್ಗೆ ತೆರೆದ ಮನಸ್ಸನ್ನುಳ್ಳ ಆಧುನಿಕ ವಿಜ್ಞಾನಿಗಳ ಸಹಾಯದಿಂದಾಗಿ ನಾವು ಈ ಎಲ್ಲಾ ಮಾಹಿತಿಯ ಶೋಧವನ್ನು ನಡೆಸಿದ್ದೇವೆ ಮತ್ತು ಈ ಕಾರ್ಯವನ್ನು ಕುತೂಹಲಕಾರಿಯಾದ ಮನಸ್ಸಿನಿಂದ, ತಾರ್ಕಿಕವಾಗಿ, ವಿವೇಚನೆಯಿಂದ, ವೈಜ್ಞಾನಿಕವಾದ ಮನಸ್ಸಿನಿಂದ ಮಾಡಿದ್ದೇವೆ. ಈ ಜ್ಞಾನವನ್ನು ನವೀನವಾದ, ಬಹುಜ್ಞಾನದ ಶಾಖೆಗಳ ದೃಷ್ಟಿಕೋನಕ್ಕೆ ಅನುಗುಣವಾಗಿ ಅರಿಯಲೆತ್ನಿಸಿದ್ದೇವೆ. ಈ ವಿಶ್ಲೇಷಣೆಯ ಸಂಕಲನವೇ ಭಾರತ್‌ಗ್ಯಾನ್.

ಅಲಾಭದಾಯಕವಾದ ಸಂಶೋಧನಾ ಸಂಸ್ಥೆಯಾದ ಭಾರತ್‌ಗ್ಯಾನ್, ಜಗತ್ತಿನ ಎಲ್ಲೆಡೆಗೂ ಈ ಜ್ಞಾನ ತಲುಪಿ, ಎಲ್ಲರೂ ಇದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲೆಂಬ ಉದ್ದೇಶದಿಂದ ಅನೇಕ ರೀತಿಯ ಮಾಧ್ಯಮಗಳನ್ನು ಬಳಸುತ್ತಿದೆ.

ಭಾರತ್ ಗ್ಯಾನ್‌ನ ಸಂಕಲನಗಳನ್ನು www.bharathgyan.com

Email: bharathgyan@gmail.com

ಭಾರತ್ ಗ್ಯಾನ್‌ನ ಬೆಂಗಳೂರಿನ ಸಂಪರ್ಕ:

Email: Venkatesh.anuradha@yahoo.com

ದೂರವಾಣಿ: 8105955599

*********************